**JULY 03, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಇದೇ 15 ರಿಂದ, 26 ವರೆಗೆ, 16ನೇ ವಿಧಾನಸಭೆಯ 4ನೇ ಅಧಿವೇಶನ.**
- **ಹಾಲಿನ ಪ್ರೋತ್ಸಾಹ ಧನ ಬಾಕಿ; ಹೈನುಗಾರರಿಗೆ ಶೀಘ್ರ ಬಿಡುಗಡೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಲು, ರಾಜ್ಯದ ನಾಲ್ಕು ಐತಿಹಾಸಿಕ ತಾಣಗಳು, ಅರ್ಹ – ಸಂಸದೆ ಸುಧಾ ಮೂರ್ತಿ.**
- **ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ 144ನೇ ಜನ್ಮ ದಿನ; ತನ್ನಿಮಿತ್ತ ರಾಜ್ಯಾದ್ಯಂತ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**16ನೇ ವಿಧಾನಸಭೆಯ 4ನೇ ಅಧಿವೇಶನ, ಬರುವ 15ನೇ ತಾರೀಖು ಸೋಮವಾರದಿಂದ 26ನೇ ತಾರೀಖು ಶುಕ್ರವಾರದ ವರೆಗೆ ನಡೆಯಲಿದೆ ಎಂದು, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ. ಒಟ್ಟು 9 ದಿನಗಳ ಕಾಲ ವಿಧಾನಸಭೆ ಅಧಿವೇಶನ ನಡೆಸಲು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸೂಚಿಸಿದ್ದಾರೆ.**

<><><>

**ಬಾಕಿಯಿರುವ ಹಾಲಿನ ಪ್ರೋತ್ಸಾಹ ಧನವನ್ನು, ರಾಜ್ಯದ ಹಾಲು ಒಕ್ಕೂಟಗಳ ಮೂಲಕ, ಹೈನುಗಾರರಿಗೆ ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಕೆ.ಎಂ.ಎಫ್. ವತಿಯಿಂದ 1 ಕೋಟಿ ಲೀಟರ್ ಹಾಲಿನ ಸಂಗ್ರಹದ ಸಂಭ್ರಮಾಚರಣೆ ಅಂಗವಾಗಿ, ಗೋ ಮಾತೆಗೆ ಪೂಜೆ ಸಲ್ಲಿಸಿ ಅವರು**

ಮಾತನಾಡಿದರು. ರಾಜ್ಯದಲ್ಲಿ ಸುಮಾರು 16 ಸಾವಿರ ಹಾಲು ಒಕ್ಕೂಟಗಳಿದ್ದು, 15 ಯೂನಿಯನ್‌ಗಳ ಮೂಲಕ ಹಾಲಿನ ಮಾರಾಟ ಮಾಡಲಾಗುತ್ತಿದೆ ಎಂದರು.

<><><>

ವಿಜಯಪುರ ಜಿಲ್ಲೆ, ಬಬಲೇಶ್ವರ ತಾಲೂಕಿನ, ಬಬಲಾದಿ ಗ್ರಾಮದ ರೈತ ರಾಮನಗೌಡ ದ್ಯಾವನಗೌಡ ಪಾಟೀಲ್ ಅವರ, 8 ವರ್ಷದ ಎತ್ತು 18 ಲಕ್ಷದ 1 ಸಾವಿರ ರೂಪಾಯಿಗೆ, ಮಾರಾಟವಾಗಿ ಇಡೀ ರಾಜ್ಯದ ಗಮನ ಸೆಳೆದಿದೆ. ಕಳೆದ 3 ವರ್ಷಗಳಲ್ಲಿ ಈ ಎತ್ತು, 30ಕ್ಕೂ ಹೆಚ್ಚು ಪಾರಂಪರಿಕ ತೆರೆ ಬಂಡಿ, ಹೆಬ್ಬಂಡೆಗಳನ್ನು ಎಳೆಯುವ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದಿದೆ. ಎತ್ತಿನ ವಿಶೇಷತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರೈತ ರಾಮನಗೌಡ ಪಾಟೀಲ.

<><><>

ರೈತ ರಾಮನಗೌಡ ಪಾಟೀಲ ಧ್ವನಿ 25 ಸೆಕೆಂದುಗಳು

<><><>

ಶ್ರವಣ ಬೆಳಗೊಳ, ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲು ಸೇರಿದಂತೆ, ದೇಶದ 57ಕ್ಕೂ ಹೆಚ್ಚು, ಐತಿಹಾಸಿಕ ಪ್ರಾಮುಖ್ಯತೆಯ ತಾಣಗಳನ್ನು, ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು, ಕ್ರಮ ಕೈಗೊಳ್ಳುವಂತೆ, ರಾಜ್ಯಸಭೆ ನಾಮ ನಿರ್ದೇಶಿತ ಸದಸ್ಯೆ ಸುಧಾ ಮೂರ್ತಿ, ಕೇಂದ್ರ ಸರ್ಕಾರವನ್ನು ಕೋರಿದ್ದಾರೆ. ರಾಷ್ಟ್ರಪತಿಯವರ ವಂದನಾ ನಿರ್ಣಯದ ಚರ್ಚೆ ವೇಳೆ ಮಾತನಾಡಿದ ಅವರು, ಇತ್ತೀಚೆಗೆ ಗರ್ಭಕೋಶದ ಕ್ಯಾನ್ಸರ್ ಪ್ರಕರಣ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು 9 ರಿಂದ 14 ವರ್ಷ ವಯಸ್ಸಿನ ಬಾಲಕಿಯರಿಗೆ, ಲಸಿಕೆ ನೀಡುವ ಅಭಿಯಾನ ಆರಂಭಿಸುವಂತೆ, ಮನವಿ ಮಾಡಿದರು.

<><><>

ಬರುವ ಡಿಸೆಂಬರ್ 20, 21 ಹಾಗೂ 22 ರಂದು, ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲಿದೆ. ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮನ್ವಯ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ನೇತೃತ್ವದಲ್ಲಿ ಸಭೆ ನಡೆಯಿತು.

<><><>

ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಿ.ಕೆ.ರವಿಕುಮಾರ್ ಚಾಮಲಾಪುರ ಅವರ ನಿಧನದ ಹಿನ್ನೆಲೆ, ತೆರವಾಗಿರುವ ಅಧ್ಯಕ್ಷರ ಜವಾಬ್ದಾರಿಯನ್ನು ನಿರ್ವಹಿಸಲು, ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲು ಸಭೆ ನಿರ್ಧರಿಸಿತು.

<><><>

ರಾಜ್ಯದಲ್ಲಿ ಸರ್ಕಾರಿ ಆಸ್ತಿ ರಕ್ಷಿಸಲು, ಸಮೀಕ್ಷೆ ಆರಂಭವಾಗಿದೆ; ಅಂದಾಜು 14 ಲಕ್ಷ ಸರ್ಕಾರಿ ಜಾಗೆಗಳಿದ್ದು, ಒತ್ತುವರಿ ಲೆಕ್ಕಿಸಬೇಕಿದೆ. ಈ ತಿಂಗಳಾಂತ್ಯಕ್ಕೆ ಸಮೀಕ್ಷಾ ಕಾರ್ಯ ಮುಗಿಯಲಿದ್ದು, ಬಳಿಕ ಒತ್ತುವರಿ ತೆರವು ಆರಂಭಿಸುವುದಾಗಿ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಅವರು, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಮಂಗಳೂರು, ಕೊಡಗು, ಉಡುಪಿ, ಚಿಕ್ಕಮಗಳೂರು ಜಿಲ್ಲೆಯ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು. ಕಂದಾಯ ಇಲಾಖೆ ಆಡಳಿತ ಚುರುಕುಗೊಳಿಸಲು, ಇ–ಆಫೀಸ್ ತೆರೆಯಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಚನಗಳ ಮೌಲ್ಯವನ್ನು ಜಗತ್ತಿಗೆ ತಿಳಿಸಿದ ಸಾಧಕರು, ಶರಣ ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು, ಕನ್ನಡ ನಾಡಿಗೆ ವಚನ ಸಾಹಿತ್ಯ ಸಂಗ್ರಹಿಸಿ ಕೊಟ್ಟ, ಮಹನೀಯರು ಎಂದು, ರಾಜ್ಯಾದ್ಯಂತ ಜರುಗಿದ ವಿಶೇಷ ಕಾರ್ಯಕ್ರಮಗಳಲ್ಲಿ, ಮಹನೀಯರು ಅಭಿಪ್ರಾಯ ಪಟ್ಟಿದ್ದಾರೆ. ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಡಾಕ್ಟರ್ ಫ.ಗು.ಹಳಕಟ್ಟಿ ಅವರ ಜನ್ಮ ದಿನದ ಅಂಗವಾಗಿ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ, ಪ್ರಾಧ್ಯಾಪಕ ಶಿವಯೋಗಿ ಹಂಚಿನಮನೆ ಅವರು ಮಾತನಾಡಿ, ಧಾರವಾಡದ ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು, ತಮ್ಮ 20 ವರ್ಷಗಳ ಸಂಶೋಧನೆ ಮೂಲಕ, 250ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದು, 22 ಸಾವಿರ ವಚನಗಳು, 1 ಸಾವಿರ ಹಸ್ತ ಪ್ರತಿಗಳನ್ನು ಸಂಗ್ರಹಿಸಿದ್ದಾರೆ. ತಮ್ಮ ಸ್ವಂತ ಮನೆಯನ್ನೂ ಮಾರಿ, ಹಿತಚಿಂತಕ ಮುದ್ರಣಾಲಯ ತೆರೆದು, ನವಕರ್ನಾಟಕ ಹಾಗೂ ಶಿವಾನುಭವ ಮಾಸ ಪತ್ರಿಕೆ ಮೂಲಕ, ವಚನ ಸಾಹಿತ್ಯ ಪ್ರಕಟಿಸಿದ್ದಾರೆ ಎಂದರು.

<><><>

12ನೇ ಶತಮಾನದ ಶರಣರ ವಚನಗಳಿಗೆ, ರೂಪ ಕೊಟ್ಟು, ಬೆಳಕಿಗೆ ತಂದ ವಚನ ಫ.ಗು. ಹಳಕಟ್ಟಿವರ ಶ್ರಮವನ್ನು ನಾಡು ಮರೆಯುವಂತಿಲ್ಲ ಎಂದು ಮುಖ್ಯಮಂತ್ರಿಗಳ ಸಲಹೆಗಾರ ಹಾಗೂ ಆಳಂದ ಶಾಸಕ ಬಿ.ಆರ್.ಪಾಟೀಲ್ ಅವರು, ಕಲಬುರಗಿಯಲ್ಲಿ ಹೇಳಿದರು.

<><><>

ಯುವ ಜನಾಂಗ ವಚನ ಸಾಹಿತ್ಯದ ತತ್ವಗಳನ್ನು, ಅರಿತು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಕಾಯಕ, ದಾಸೋಹ ಸಿದ್ಧಾಂತಗಳಡಿ ನವ ಸಮಾಜ ನಿರ್ಮಾಣವಾಗಬೇಕು ಎಂದು, ಗದಗ  ತೋಂಟದಾರ್ಯ ಮಠದ ಡಾಕ್ಟರ್ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅಭಿಪ್ರಾಯ ಪಟ್ಟರು.

<><><>

ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಫ.ಗು.ಹಳಕಟ್ಟಿ ಅವರ ಸಾಧನೆ ಜಗತ್ತಿಗೆ ಮಾದರಿಯಾಗಿದೆ ಎಂದು, ವಿಧಾನ ಪರಿ 'ತ್ ಸದಸ್ಯೆ ಹೇಮಲತಾ ನಾಯಕ್ ಅವರು, ಕೊಪ್ಪಳದಲ್ಲಿ ತಿಳಿಸಿದ್ದಾರೆ.

<><><>

12ನೇ ಶತಮಾನದ ಬಸವಾದಿ ಪ್ರಮಥರು ರಚಿಸಿದ, ವಚನಗಳನ್ನು ಇಂದು ನಮಗೆಲ್ಲ ತಲುಪುವಂತೆ ಮಾಡಿದ, ಫ.ಗು.ಹಳಕಟ್ಟಿ ಅವರು, ವಿಶ್ವವಿದ್ಯಾಲಯ ಸದೃಷ ಕೆಲಸ ಮಾಡಿದ್ದಾರೆಂದು, ವಿಧಾನ ಪರಿ 'ತ್ ಸದಸ್ಯ ಪಿ.ಎಚ್.ಪೂಜಾರ, ಬಾಗಲಕೋಟೆಯಲ್ಲಿ ಹೇಳಿದರು.

<><><>

ಜಮ್ಮು-ಕಾಶ್ಮೀರ್ ರೈಫಲ್ಸ್‌ನ 13ನೇ ತುಕಡಿಯ ಹವಾಲ್ದಾರ್, ವಿಜಯಪುರ ಜಿಲ್ಲೆ ತಿಕೋಟಾ ಮೂಲದ, ರಾಜು ಕರ್ಜಗಿ, ಜಮ್ಮು-ಕಾಶ್ಮೀರದಲ್ಲಿ ಮರಣವನ್ನಪ್ಪಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬನಿ ಮಿಡಿದಿದ್ದು, ಮೃತ ಯೋಧನ ಆತ್ಮಕ್ಕೆ ಚಿರಶಾಂತಿ ಸಿಗಲಿ; ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ದೊರಕಲಿ ಎಂದು ಪ್ರಾರ್ಥಿಸಿದ್ದಾರೆ.

<><><>

ಭಾರತೀಯ ಸೇನೆಯ ಸಿಪಾಯಿ ರಾಜು ಕರ್ಜಗಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಸಂತಾಪ ಸೂಚಿಸಿದ್ದಾರೆ. ವೀರ ಯೋಧನ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ತಿಕೋಟದಲ್ಲಿ ನಡೆಯಲಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

<><><>

ವಿಜಯಪುರ ಜಿಲ್ಲೆ, ಕೊಲ್ಹಾರ ತಾಲೂಕಿನ, ಬಳೂತಿ ಗ್ರಾಮದ ಹತ್ತಿರ, ಕೃಷ್ಣಾ ನದಿಯ ತೀರದಲ್ಲಿ ತೆಪ್ಪ ಮಗುಚಿ, ಆರು ಜನ ನದಿಯಲ್ಲಿ ಮುಳುಗಿ ಕಾಣೆಯಾಗಿರುವ ಶಂಕೆ ವ್ಯಕ್ತವಾಗಿದೆ. ಓರ್ವರ ಶವ ದೊರೆತಿದ್ದು, ಐವರಿಗಾಗಿ ಹುಡುಕಾಟ ಮುಂದುವರೆದಿದೆ.

<><><>

ಸ್ಕೇಟಿಂಗ್ ಕ್ರೀಡೆ, ದೈಹಿಕ ಸುದೃಢತೆ, ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೂ ಸಹಕಾರಿ. ಉತ್ತರ ಕರ್ನಾಟಕ ಭಾಗದ ಸ್ಕೇಟಿಂಗ್ ಪಟುಗಳಿಗೆ, ಭರವಸೆಯ ತರಬೇತುದಾರರಾಗಿರುವ, ಸ್ವತಃ ರಾಷ್ಟ್ರ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿರುವ, ಹುಬ್ಬಳ್ಳಿಯ ಈರಣ್ಣ ಕಾಡಪ್ಪನವರ್, ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಈ ಭಾಗದ ಪ್ರತಿಭೆಗಳು ಭಾಗವಹಿಸಲು, ಸ್ಕೇಟಿಂಗ್ ರಿಂಕ್ ಅವಶ್ಯಕತೆ ಪ್ರತಿಪಾದಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಕೋಚ್ ಈರಣ್ಣ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಈರಣ್ಣ ಕಾಡಪ್ಪನವರ್ ಧ್ವನಿ 28 ಸೆಕೆಂದುಗಳು

<><><>

'ಸ್ತ್ರೀ ಸಬಲೀಕರಣ ಹಾಗೂ ಸ್ತ್ರೀ ಸುರಕ್ಷತೆ' ಯ ಬಗ್ಗೆ, ಜನ ಜಾಗ್ರತಿ ಮೂಡಿಸಲು, ಮಧ್ಯಪ್ರದೇಶದ ಯುವತಿ ಆಶಾ ಮಾಳವೀಯ, ದೇಶದ 28 ರಾಜ್ಯಗಳನ್ನು ಒಳಗೊಂಡಂತೆ, ಒಟ್ಟು 25 ಸಾವಿರ ಕಿಲೋ ಮೀಟರ್ ಸೈಕಲ್ ಯಾತ್ರೆ ಕೈಗೊಂಡಿದ್ದಾರೆ. ರಾಷ್ಟ್ರೀಯ ಕ್ರೀಡಾಪಟು ಹಾಗೂ ಪರ್ವತಾರೋಹಿಯೂ ಆಗಿರುವ, ಆಶಾ ಮಾಳವೀಯ, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದರು.

<><><>

'ವಿಶ್ವ ಪರಿಸರ ದಿನಾಚರಣೆ–2024' ಹಿನ್ನೆಲೆ, ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭ, ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತವಾಗಿದೆ. "ಭೂಮಿಯ ಪುನಃಶ್ಚೇತನ, ಬರ ನಿರ್ವಹಣೆ ಮತ್ತು ಬರಡು ಭೂಮಿ ಚೇತರಿಕೆ ಹಾಗೂ ವನ ಮಹೋತ್ಸವ – 2024" ಎಂಬ ಧ್ಯೇಯದೊಂದಿಗೆ, ಪರಿಸರ ಜಾಗ್ರತಿ ದಿನ ಆಚರಿಸಲಾಗುತ್ತಿದೆ.

<><><>

ಇದಕ್ಕೂ ಮೊದಲು, ಈ ಬೆಳಗ್ಗೆ 9.30ಕ್ಕೆ, ವಿಧಾನಸೌಧದಿಂದ ಪರಿಸರ ಜಾಗ್ರತಿ ಜಾಥಾ, ಕಬ್ಬನ್ ಪಾರ್ಕ್ ಒಳಗಡೆಯಿಂದ ಸಾಗಿ, ಕಂಠೀರವ ಕ್ರೀಡಾಂಗಣದ ವರೆಗೆ ನಡೆಯಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವಿಶ್ವ ಮುಳ್ಳುಹಂದಿಗಳ ಯೋಗಕ್ಷೇಮ ದಿನವನ್ನು, ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗ, ಮಂಗಳವಾರ ಆಚರಿಸಿತು.

<><><>

**ಆಗಸ್ಟ್ 1 ರಿಂದ 3ರ ವರೆಗೆ, ಬೆಂಗಳೂರಿನಲ್ಲಿ ಆಯೋಜಿತ, ಇಂಡಿಯಾ ನ್ಯಾನೊ ಸಮ್ಮೇಳನ–2024ಕ್ಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ಬೆಂಗಳೂರಿನಲ್ಲಿ ಚಾಲನೆ ನೀಡಿದರು.**

<><><>

**ದೇಶದಾದ್ಯಂತ ಭಾರತೀಯ ನ್ಯಾಯ ಸಂಹಿತೆ–ಬಿ.ಎನ್.ಎಸ್. ಜಾರಿಯಾಗಿದ್ದು, ರಾಜ್ಯಾದ್ಯಂತ 66 ಪ್ರಕರಣಗಳು ದಾಖಲಾಗಿವೆ ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.**

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇದೇ 15 ರಿಂದ, 26 ವರೆಗೆ, 16ನೇ ವಿಧಾನಸಭೆಯ 4ನೇ ಅಧಿವೇಶನ.**
- **ಹಾಲಿನ ಪ್ರೋತ್ಸಾಹ ಧನ ಬಾಕಿ; ಹೈನುಗಾರರಿಗೆ ಶೀಘ್ರ ಬಿಡುಗಡೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಲು, ರಾಜ್ಯದ ನಾಲ್ಕು ಐತಿಹಾಸಿಕ ತಾಣಗಳು, ಅರ್ಹ – ಸಂಸದೆ ಸುಧಾ ಮೂರ್ತಿ.**
- **ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ 144ನೇ ಜನ್ಮ ದಿನ; ತನ್ನಿಮಿತ್ತ ರಾಜ್ಯಾದ್ಯಂತ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**